ಕಡಿಮೆಯಾಗುತ್ತಿದ್ದಂತೆ ಮುಗಿಲನ್ನು ನೋಡುತ್ತ ಮೈಮರೆಯುವುದು ನನ್ನ ಹವ್ಯಾಸವಾಗಿತ್ತು. ಆ ಆಕಾಶ, ಅದರಾಚೆಯ ಅವಕಾಶ... ಅದರಲ್ಲಿ ಮಿನುಗುತ್ತಿರುವ ಸಾವಿರಾರು ನಕ್ಷತ್ರಗಳು, ಒಂದೊಂದು ನಕ್ಷತ್ರವೂ ಹೊಂದಿರುವ ಹತ್ತಾರು ಗ್ರಹಗಳು, ಅವುಗಳಿಗೆ ಮತ್ತೆ ಉಪಗ್ರಹಗಳು... ಒಂದೊಂದು ನಕ್ಷತ್ರಗಳು ಸೂರ್ಯನಿಗಿಂತ ದೊಡ್ಡವಿವೆಯಂತೆ. ಅಂಥವುಗಳ ಒಂದು ಬೃಹತ್ ಸಮೂಹವೇ ಆಕಾಶಗಂಗೆಯಲ್ಲಿ ಅಡಗಿವೆಯಂತೆ. ಒಂದೊಂದೂ ಹತ್ತಾರು ನೂರಾರು ಸಾವಿರಾರು ಜ್ಯೋತಿರ್ವರ್ಷದಷ್ಟು ದೂರದಲ್ಲಿವೆಯಂತೆ. ಇದರಲ್ಲಿ ಯಾವುದಾದರೂ ಹೊಳೆಯುತ್ತಿರುವ ನಕ್ಷತ್ರ ಈಗಾಗಲೇ ಸೂಪರ್ ನೋವಾ ಆಗಿ ಸಿಡಿದು ಸತ್ತೇ ಹೋಗಿದ್ದರೂ ಅದು ನಮಗೆ ತಿಳಿಯಲು ಇನ್ನೆಷ್ಟೋ ಕಾಲ ಹಿಡಿಯುತ್ತದಂತೆ.

ಅಂದರೆ ಅದರ ವಿಸ್ತಾರವನ್ನು ಸುಮ್ಮನೆ ಊಹಿಸಿ. ಇವೆಲ್ಲವುಗಳ ಮಧ್ಯೆ ಭೂಮಿಯ ಸ್ವಂತ ಮಗನಂತಿರುವ ಚಂದ್ರನನ್ನೇ ಮರೆತುಬಿಟ್ಟೆನಲ್ಲ. ಈ ಚಂದ್ರ ಮಹಾರಸಿಕ. ಅವನು ಬಂದನೆಂದರೆ ಅದೇನೋ ಒಂಥರ ಮನೋವಿಲಾಸ. ಅವನ ಬೆಳಕಿನಲ್ಲಿ ಸಾವಿರಾರು ನಕ್ಷತ್ರಗಳು ಮರೆಯಾಗಿ ಬಿಡುತ್ತಿದ್ದವು. ಆಗೆಲ್ಲ ನಾನು ಇನ್ನೇನು ಅನಿವಾರ್ಯ ಎನ್ನುವಂತೆ ಚಂದಮಾಮನ ಜತೆ ಸಂವಾದ ನಡೆಸುತ್ತಿದ್ದರೆ, ಈರ್ಷ್ಯೆಯಿಂದ ಒಳ್ಳೆ ಕಟ್ಟಿಕೊಂಡ ಹೆಂಡತಿಯಂತೆ ಉರಿದುಬೀಳುತ್ತಿದ್ದಳು ಈ ಬೇವಮ್ಮ. ತನಗೆ ಕಾಣಲ್ಲವೆಂದರೆ ನನ್ನ ರೆಂಬೆಕೊಂಬೆಗಳನ್ನು ವಾರೆ ಮಾಡಿಯಾದರೂ ತೋರಿಸಬಹುದು, ಆದರೆ ಆಕೆಯದು ಅಸೂಯೆ. ಎಲ್ಲದಕ್ಕೂ ಕೊಂಕು ತೆಗೆಯುತ್ತಿದ್ದಳು. ನಾನು ಏಕತಾನತೆಯಿಂದ ನಿಸರ್ಗವನ್ನು ಅನುಭವಿಸಲೂ ಬಿಡುತ್ತಿರಲಿಲ್ಲ. ಅವಳ ಬೇರು, ಕಾಂಡ, ಎಲೆ, ಕಾಯಿ, ಹೂವು, ಮೊಗ್ಗುಗಳಲ್ಲೆಲ್ಲ ವಿಷವೇ ಇರುವಂತೆ ಅವಳ ಮನಸ್ಸು ಕೂಡ ವಿಷವೇ. ನನ್ನನ್ನು ಎಳೆದು ಎಳೆದು ವಾಸ್ತವಕ್ಕೆ ಬಿಡುತ್ತಿದ್ದಳು. ನಿನ್ನ ಜೊತೆಗೆ ನನ್ನನ್ನೂ ಕಡಿಯಲು ಬಂದಿದ್ದನಲ್ಲ ಆ ಮಂಜುನಾಥ, ಅವನಿಗೇನು ಮಾಡಿದೆ ಎಂದು ಪ್ರಲಾಪಿಸುತ್ತಿದ್ದಳು. ನಾನು 'ನನ್ನನ್ನು ನನ್ನ ಪಾಡಿಗೆ ಬಿಡು ಮಾರಾಯ್ತಿ, ನೀನೂ ಬೇಕಾದರೆ ಆ ಚಂದ್ರನೊಂದಿಗೆ ಸಲ್ಲಾಪಿಸು, ನನ್ನದೇನೂ ಅಭ್ಯಂತರವಿಲ್ಲ. ಅವನೂರಿನ ಕಥೆಯನ್ನು ಇಬ್ಬರೂ ಸೇರಿ ಕೇಳೋಣ ಬಾ ಬೇಕಾದರೆ' ಎಂದರೂ ಕೇಳುತ್ತಿರಲಿಲ್ಲ. ಬರೀ ಗೊಣಗರಿಯುವುದು ಆ ಮೂಲಕ ನನ್ನ ತನ್ಮಯತೆಯನ್ನು ಹಾಳು ಮಾಡುವುದೇ ಅವಳ ಬದುಕಾಗಿತ್ತು. ಆಕೆ ಭೂಮಿಯ ಕಡೆಗೆ ವಾಲಿದರೆ, ನಾನು ಆಕಾಶದ ಕಡೆಗೆ ಚಾಚುತ್ತಿದ್ದೆ. ಎಷ್ಟೋ ಸಲ ನನಗೆ ಇದು ರೇಜಿಗೆ ಅನ್ನಿಸಿ, 'ನಿನಗೆ ನೀರು, ಆಹಾರ ಏನೂ ಸಿಗದಂತೆ ನನ್ನ ಬೇರುಗಳಿಗೆ ಹೇಳಿ ಬಂದ್ ಮಾಡಿಸಿಬಿಡುತ್ತೇನೆ ನೋಡು' ಎಂದು ಗದರಿದರೆ, ನಾನು ಅದಕ್ಕೂ ಹೇಸುವವನಲ್ಲವೆಂದು ಸುಮ್ಮನಾಗುತ್ತಿದ್ದಳು. ಸ್ವಲ್ಪ ಹೊತ್ತಾದ ಮೇಲೆ ಮತ್ತದೇ...

ಅತ್ತ, ಮಂಜುನಾಥ ಮರ ಕಡಿಯಲು ಗುತ್ತಿಗೆ ಕೊಟ್ಟಿದ್ದನಲ್ಲ, ಆತ ಯಾವಾಗ ಮರ ಕಡಿಯಲು ಸಾಧ್ಯವಾಗಲಿಲ್ಲವೋ ಆಗ ಅವನಿಗೆ ಕೊಟ್ಟಿದ್ದ ಕಮಿಷನ್ ಅನ್ನು ಹಿಂದಿರುಗಿಸುವಂತೆ ಪೀಡಿಸಲಾರಂಭಿಸಿದ್ದ. 'ನನ್ನ ಹತ್ತಿರ ಎಲ್ಲಿದೆ, ಎಲ್ಲ ಖರ್ಚಾಗಿದೆ. ಅದರಲ್ಲಿ ಮಗ ಹಟ ಹಿಡಿದ ಅಂತ ಬೈಕು ಕೊಡಿಸಿಬಿಟ್ಟೆ ನೋಡು. ಬೇರೆ ಯಾವುದಾದರೂ ಬರಲಿ, ಅದರಲ್ಲಿ ಅಡ್ಜಸ್ಟ್ ಮಾಡ್ಕೊಡ್ತೀನಿ ತಡೀ... ಇಲ್ಲಾಂದ್ರೆ ಸ್ವಲ್ಪ ಟೈಂ ಕೊಡು, ಮೇಲಿನಿಂದ ಒತ್ತಡ ತಂದು ಕಡಿಸೇ ಕಡಿಸುತ್ತೇನೆ. ರೂಲ್ಸ್ ಪ್ರಕಾರ ಕಡಿಯಲೇಬೇಕು. ಅಷ್ಟಕ್ಕೂ ಬಗ್ಗಲಿಲ್ಲ ಅಂದ್ರೆ ಕೋರ್ಟ್‌ನಿಂದ ಆರ್ಡರ್ ಮಾಡುಸ್ತೀನಿ, ಡೋಂಟ್ ವರಿ...' ಎಂದು ಸಮಾಧಾನಿಸಲಾರಂಭಿಸಿದರೂ ಆತ ಯಾವುದನ್ನೂ ಕೇಳುವ ಸ್ಥಿತಿಯಲ್ಲಿರಲಿಲ್ಲ. 'ಅವಾಗ ಬೇಕಾದರೆ ಮತ್ತೆ ಕೊಡ್ತೀನಿ, ಈಗ ವಾಪಸ್ಸು ಬೇಕೇ ಬೇಕು' ಎಂದು ಪಟ್ಟು ಹಿಡಿದಾಗ, 'ನೋಡಪ್ಪಾ, ಬೇಕಾದ್ರೆ ಆ ದುಡ್ಡಲ್ಲಿ ತಗೊಂಡಿರೋ ಈ ಬೈಕನ್ನೇ ಬೇಕಾದ್ರೆ ತಗಂಡೋಗು' ಅಂದಾಗ, ಅಷ್ಟಾದ್ರೂ ಗಿಟ್ಟಿತಲ್ಲ ಅಂತ ಅದನ್ನೇ ಒಯ್ಯಲು ಹೋದ. ಅಷ್ಟರಲ್ಲಿ ಅದೆಲ್ಲಿದ್ದನೋ ಅವನ ಮಗ, ತಾನು ಅದನ್ನು ಕೊಡುವುದಿಲ್ಲವೆಂದು ರಚ್ಚೆ ಹಿಡಿದು, ಜಿಗಿದು ಕುದುರೆ ಹತ್ತಿದಂತೆ ಹತ್ತಿ, ಇಗ್ನಿಷನ್‌ನಲ್ಲಿ ಕೀ ಇಟ್ಟು ತಿರುಗಿಸಿ ಎಡಗಾಲಲ್ಲಿ ಗೇರನ್ನು ಒತ್ತಿ ಗಾಡಿಯನ್ನು ಚಂಗನೆ ಎಗರಿಸಿಕೊಂಡು ಪರಾರಿಯಾಗಿಬಿಟ್ಟ.

ಅವತ್ತಿನ ದಿನ ಸಂಜೆಯ ಇಳಿಹೊತ್ತು ಅದು. ಯಾರೋ ಇಪ್ಪತ್ತರ ತರುಣ, ಹೊಸದಾಗಿ ಬಂದಿದ್ದ ಬೈಕಿನಲ್ಲಿ ಸುಯ್ಯೆಂದು ಗಾಳಿಗಿಂತಲೂ ವೇಗವಾಗಿ ನುಗ್ಗಿಹೋದನಲ್ಲ ಎಂದು ತಿರುಗಿನೋಡಿದೆ. ನನ್ನ ಪಕ್ಕದಲ್ಲಿ ರಸ್ತೆ ಆದಾಗಿನಿಂದಲೂ ಇಷ್ಟೊಂದು ವೇಗದ ಕಾರನ್ನಾಗಲೀ ಬೈಕನ್ನಾಗಲೀ ನಾನು ನೋಡಿರಲಿಲ್ಲ. ಅದು ಸ್ಪೋರ್ಟ್ಸ್ ಬೈಕಂತೆ. ನನ್ನ ಕೆಳಹಂತದ ಎಲೆಗಳು ಅದನ್ನು ನೋಡಿ ಆಶ್ಚರ್ಯಚಕಿತರಾಗಿ ಮೇಲಿನ ಎಲೆಗಳಿಗೆ ಸಂವೇದನೆಯನ್ನು ವರ್ಗಾಯಿಸಿದವು. ನಾನು ಕುತೂಹಲದಿಂದ ಅವನು ಅಷ್ಟೊಂದು ವೇಗದಲ್ಲಿ ಎಲ್ಲಿಗೆ ಹೋಗುತ್ತಿದ್ದಾನೆ ನೋಡುವಂತೆ ಮೇಲಿನ ಎಲೆಗಳಿಗೆ ನಿರ್ದೇಶನ ನೀಡಿದೆ.

ನನ್ನಿಂದ ದಾಟಿ ಹೋಗಿ ಒಂದು ನಿಮಿಷವೂ ಆಗಿರಲಿಲ್ಲ. ಅಷ್ಟರಲ್ಲೇ ಅವನು ಕಣ್ಣಿಗೆ ಕಾಣದಷ್ಟು ವೇಗವಾಗಿ ಹೋಗಿಬಿಟ್ಟಿದ್ದ. ನೋಡು ನೋಡುತ್ತಿದ್ದಂತೆಯೇ ಅವನ ಬೈಕು ಗಾಳಿಯಲ್ಲಿ ಹಾರಿದಂತೆ, ಏನಾಯಿತೆಂದು ನೋಡುವಷ್ಟರಲ್ಲಿ ನೂರಿನ್ನೂರು ಮೀಟರ್ ದೂರಕ್ಕೆ ಹಾರಿ ಅಲ್ಲಿಂದ ಕನಿಷ್ಠ ಇಪ್ಪತ್ತು ಪಲ್ಟಿಯನ್ನಾದರೂ ಹೊಡೆದು ಅಂತಿಮವಾಗಿ ಆ ಬೈಕು ಒಂದು ಕಡೆ, ಆ ಹುಡುಗ ಇನ್ನೊಂದು ಕಡೆ ಬಿದ್ದು ತಟಸ್ಥವಾದವು. ಇದೆಲ್ಲ ಸುಮಾರು ಹತ್ತು ಹದಿನೈದು ಸೆಕೆಂಡುಗಳಲ್ಲಿ ನಡೆದುಹೋಯಿತು. ಆ ಬೈಕಿನ ಒಂದು ಪಾರ್ಟೂ ಇರಬೇಕಾದ ಕಡೆ ಇರಲಿಲ್ಲ, ಅಂತೆಯೇ ಆ ಹುಡುಗನವೂ ಸಹ. ಇಡೀ ಮೈಕೈ ನುಜ್ಜುಗುಜ್ಜಾಗಿಬಿಟ್ಟಿತ್ತು. ಆ ಪ್ರಾಣಪಕ್ಷಿ ಅನ್ನುವುದು ಅದ್ಯಾವಾಗ ಹೇಗೆ ಹಾರಿಹೋಗಿತ್ತೋ ಗೊತ್ತೇ ಆಗಲಿಲ್ಲ.

ಅಯ್ಯೋ, ಯಾರ ಮನೆಯ ಮಗುವೋ ಎಂದು ನಾನು ಹಪಹಪಿಸುತ್ತಿದ್ದರೆ, ನನ್ನ ಹೆಂಡತಿ ಅನ್ನಿಸಿಕೊಂಡವಳು 'ಅವನಿಗೆ ಹಂಗೇ ಆಗಬೇಕು' ಅನ್ನುತ್ತಿದ್ದಳು. 'ಯಾರಿಗೆ, ಏನಾಯಿತು?' ಎಂದರೆ, 'ಅವನು, ನಮ್ಮ ಬುಡಕ್ಕೆ ಆ್ಯಸಿಡ್ ಹಾಕಿದನಲ್ಲ, ಅ ನಿಮ್ಮ ಮಂಜುನಾಥ, ಆತನ ಏಕಮಾತ್ರ ಪುತ್ರ...' ಎಂದು ವ್ಯಂಗ್ಯವಾಡಿದಳು. 'ಅಯ್ಯೋ... ಸಾವಿನಲ್ಲಿ ಹಾಗೆಲ್ಲ ವಿಕೃತಿಯನ್ನು ಕಾಣಬಾರದೇ...' ಎಂದು ತಿಳಿಹೇಳಿದರೂ ಆಕೆಯ ವಿಕೃತ ಸಂತೋಷಕ್ಕೇನು ಪಾರವೇ ಇರಲಿಲ್ಲ... 'ನಮ್ಮ ಬುಡಕ್ಕೇ ವಿಷ ಹಾಕಲು ಬಂದಿದ್ದ, ಅವನನ್ನು ಕ್ಷಮಿಸುವುದೇ...' ಎಂದು ಬುಸುಗುಡುತ್ತಿದ್ದಳು. 'ಅದಕ್ಕೇ ಇರಬೇಕು ಕಣೇ, ಜನರು ನಿನ್ನ ಬುಡಕ್ಕೆ ವಿಷದ ನಾಗರಗಳ ವಿಗ್ರಹಗಳನ್ನಿಟ್ಟು ಸಮಾಧಾನಿಸಿಕೋ ಎಂದು ಹಾಲೆರೆದು ಬೇಡಿಕೊಳ್ಳುವುದಿರಬೇಕು...' ಎಂದು ಕಿಚಾಯಿಸಿದೆ.

'ಆ ನಿಮ್ಮ ಮಂಜುನಾಥ, ಚಿಕ್ಕ ಹುಡುಗನಾಗಿದ್ದಾಗಲೇ ಗಾಣಕ್ಕೆ ಹೂಡಿದ ಎತ್ತು ಹಗಲೂ ರಾತ್ರಿ ಸುತ್ತೀ ಸುತ್ತೀ ಬಸವಳಿದು ಒಂದು ಕ್ಷಣ ಆಯಾಸ ತೀರಿಸಿಕೊಳ್ಳಲು ನಿಂತರೂ ಬಿಡದಂತೆ ಬಾರುಗೋಲಿನಿಂದ ಬಡಿಯುತ್ತಿದ್ದಂಥವನು. ಹಾಗೊಮ್ಮೆ ಸುತ್ತಿದರೆ ಒಂದು ಹನಿ ಎಣ್ಣೆಯಾದರೂ ಹೆಚ್ಚಾಗಿ ಬಂದೀತು ಎಂದು ಲೆಕ್ಕಹಾಕುವಂಥ ಕಟುಕನವನು...' ಎಂದು ವರಾತ ತೆಗೆದಳು. 'ನೋಡೇ, ಮನುಷ್ಯ ಮೂಲತಃ ಒಳ್ಳೆಯವನು. ಕಾಲ, ಸಂದರ್ಭಗಳು ಅವನನ್ನು ಕೆಟ್ಟವನನ್ನಾಗಿ ಮಾಡುತ್ತವೆ ಅಷ್ಟೇ...' ಎಂದರೂ, 'ಇಲ್ಲ ರೀ, ನಮ್ಮ ಹಿರಿಯರು ಅಷ್ಟಿಲ್ಲದೇ ಗಾದೆ ಮಾತುಗಳನ್ನು ಸೃಷ್ಟಿಸಿದ್ದಾರಾ? ಅವರ ಅನುಭವದ ಮುತ್ತುಗಳವು...' ಎಂದು ಜಾತಿಸೂಚಕ ಗಾದೆ ಮಾತೊಂದನ್ನು ಹೇಳಲು ಉಪಕ್ರಮಿಸುವಷ್ಟರಲ್ಲಿ ನನ್ನ ಮುಂದಿನ ರಸ್ತೆಯಲ್ಲಿ ಎರಡು ಮೂರು ವಾಹನಗಳಲ್ಲಿ ಆ ಹುಡುಗನ ಕಡೆಯವರು ಅತ್ತ ದೌಡಾಯಿಸಿ ಹೋಗುತ್ತಿದ್ದತ್ತ ಗಮನಹರಿಸಿ ಮಾತನ್ನು ನಿಲ್ಲಿಸಿದೆ.

ಅದಾಗಿ ಮೂರು ದಿನ ಆಗಿರಲಿಲ್ಲ. ಅದೇ ಮಂಜುನಾಥ ಬಂದ. ಒಬ್ಬನೇ ಬಂದಿದ್ದ. ಯಾರೂ ಅವನ ಜತೆ ಇರಲಿಲ್ಲ. ತುಂಬ ಮಂಕಾಗಿದ್ದ. ಬಂದವನು ನನ್ನ ಬುಡದಲ್ಲಿ ಕುಳಿತ. ಕುಳಿತವನು ನನಗೆ ಆ್ಯಸಿಡ್ ಹಾಕಿದ್ದ ಬುಡವನ್ನು ನೋಡಿದ. ನೋಡಿದವನೇ ಎದ್ದು ಉದ್ದಂಡ ನಮಸ್ಕಾರ ಹಾಕಿದವನು ಎಷ್ಟು ಹೊತ್ತಾದರೂ ಏಳಲೇ ಇಲ್ಲ. ಊರ ಜನರಲ್ಲಿ ಕೆಲವರು ಇವನು ಮಂಜುನಾಥನಲ್ಲವೇ, ಏನೋ ಕರಾಮತ್ತು ಮಾಡಲೇ ಬಂದಿರುವನೆಂಬುವಂತೆ ನೋಡಿದರೂ, ಮೊನ್ನೆ ತಾನೇ ಅವನ ಮಗ ಸತ್ತಿರುವುದರಿಂದ ಅವನ ಮೇಲೆ ಆಕ್ರಮಣ ಮಾಡದೇ ಅವನ ಕ್ರಿಯೆ ಪ್ರತಿಕ್ರಿಯೆಗಳನ್ನೆಲ್ಲ ವಾರೆಗಣ್ಣಿನಿಂದ, ಒಂದು ಅನುಮಾನದ ದೃಷ್ಟಿಯಿಂದಲೇ ದಿಟ್ಟಿಸುತ್ತಿದ್ದರು. ಆ ಘಟನೆ ಆದಾಗಿನಿಂದ ನನ್ನನ್ನು ಉಳಿಸಿಕೊಳ್ಳಬೇಕೆಂಬ ಏಕಮೇವ ಉದ್ದೇಶದಿಂದ ನಮ್ಮೂರಿನ ಹುಡುಗರೆಲ್ಲ ತಮ್ಮ ನಡುವಿನ